# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/ /2020-21

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 07/11/2020

**ದಿನಾಂಕ: 07-11-2020 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಡಾ॥ ಪ್ರೇಮಾನಂದ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) **(BWSSB)**
- ಶ್ರೀ. ಬಾಬುರೆಡ್ಡಿ, ಎಲೆಕ್ಟ್ರೀಕಲ್ಸ್ ಇಂಜಿನೀಯರ್, ಬಿಬಿಎಂಪಿ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ಅರೋಗ್ಯ
- ಶ್ರೀ. ರಮೇಶ್ ಎಸ್, ಹೆಬ್ಬಾಳ ಟ್ರಾಫಿಕ್ ಪೊಲೀಸ್
- ಶ್ರೀ. ಶ್ರೀನಿವಾಸ್, ಅಭಿಯಂತರರು, ದೊಡ್ಡ ಮಳೆನೀರು ಚರಂಡಿ (SWD)

**ವಾರ್ಡ್ ಸಮಿತಿ ಸದಸ್ಯರು**

- ಶ್ರೀ. ಎಲ್. ವೀರಣ್ಣ, ಎಲ್.ಕೆ.ಆರ್.ನಗರ, ವಸತಿ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ
- ಶ್ರೀ. ಸಿ. ವೆಂಕಟಸ್ವಾಮಪ್ಪ, ದೇವಿನಗರ, ಎಲ್.ಕೆ.ಆರ್.ನಗರ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ. ಶ್ರೀಧರ್, ಟಾಟಾನಗರ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ. ಅಂಜಿನಪ್ಪ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀಮತಿ. ಶಾಂತಮ್ಮ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ. ಮಲ್ಲಿಕಾರ್ಜುನ, ಟಾಟಾನಗರ, ಸದಸ್ಯರು
- ಶ್ರೀಮತಿ. ರೂಪ ಪ್ರಕಾಶ್, ಟಾಟಾನಗರ, ಸದಸ್ಯರು

- ಜಿ.ಪಿ.ಪೈ, ಟಾಟಾನಗರ, ಸದಸ್ಯರು
- ಶ್ರೀ ಜಯಚಂದ್ರಶೈನ್, ಟಾಟಾನಗರ, ಸದಸ್ಯರು
- ಶ್ರೀ ಶ್ರೀಕಾಂತ್, ಆರ್ಮ್ಕೋ ಬಡಾವಣೆ, ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳು ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಕಮಿಟಿ ಕಾಯದರ್ಶಿಗಳು ಮಾತನಾಡಿ ನವೆಂಬರ್–2020ನೇ ಮಾಹೆಯ ಈ ಸಭೆಗೆ ನೋಡೆಲ್ ಅಧಿಕಾರಿಯವರ ಸಮ್ಮುಖದಲ್ಲಿ ನಡೆಯುವ ಸಭೆಯಾಗಿದೆ ಎಂದು ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಗುರು ನೋಡೆಲ್ ಅಧಿಕಾರಿ ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ವಸತಿ ಕ್ಷೇಮಾಭಿವೃದ್ಧಿ ಸಂಘದ ಸಮಿತಿಯ ಅಧ್ಯಕ್ಷರಾದ ಶ್ರೀ ವೀರಣ್ಣ ಸಭೆಯಲ್ಲಿ ಕಮಿಟಿ ಅಧ್ಯಕ್ಷರು ಮಾತಾನಾಡಿ ಕಳೆದ ಎರಡು ವರ್ಷಗಳ ಹಿಂದೆ ಅಳವಡಿಸಿರುವ ಸಿ.ಸಿ.ಕ್ಯಾಮರಗಳಿಗೆ ಸಂಪರ್ಕ ಇಲ್ಲದ ಕಾರಣ ಅದಕ್ಕೆ ಸಂಬಂಧಿಸಿದ ನಿಯಂತ್ರಣ ಹಾಗೂ ಡಿವಿಆರ್ ಅನ್ನು ನಮ್ಮ ವೆಲ್ಫೇರ್ ಸಂಘಕ್ಕೆ ನೀಡುವಂತೆ ಮನವಿ ಮಾಡಿದರು.

ಎಲ್.ಕೆ.ಆರ್ ನಗರದ ಉಪಾಧ್ಯಕ್ಷರು ಶ್ರೀ. ಸುಬ್ರಮಣಿರಾಜು ಸದರಿ ಬಡಾವಣೆಯಲ್ಲಿ ಬೋರ್‌ವೆಲ್ ಇದ್ದು, ಈಗಾಗಲೇ ಸದರಿ ಬೋರ್‌ವೆಲ್‌ನಲ್ಲಿ ನೀರು ನಿಂತು ಹೋಗಿರುವುದರಿಂದ ಪರ್ಯಾಯ ಬೋರ್‌ವೆಲ್ ಕೊಳವೆಬಾವಿಯನ್ನು ಕೊರೆಯಿಸುವಂತೆ ಸಭೆಯಲ್ಲಿ ಮನವಿ ಮಾಡಿದರು. ನಮ್ಮ ಬಡಾವಣೆಯಲ್ಲಿ ಈಗಾಗಲೇ ನೀರಿನ ಸಮಸ್ಯೆ ಇರುವುದರಿಂದ ಬಡಾವಣೆಗಳಲ್ಲಿ ನೀರಿನ ಅಭಾವ ಹೆಚ್ಚಾಗಿರುತ್ತದೆ ಹಾಗೂ ಕಾವೇರಿ ನೀರು ಸಹ ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲವೆಂದು ತಿಳಿಸಿದರು.

ದೇವಿನಗರದ ವೆಂಕಟಸ್ವಾಮಪ್ಪ ಮಾತನಾಡಿ ದೇವಿನಗರದ ಒಂದು ಬೋರ್‌ವೆಲ್ ಇದ್ದು, ಸರಿಯಾದ ನಿರ್ವಹಣೆಯಾಗುತ್ತಿಲ್ಲ ಎಂದು ತಿಳಿಸಿದರು.

ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಮಾತನಾಡಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಒಯಂತರರಿಗೆ ನೀರಿನ ಸಮಸ್ಯೆ ಕಾಡುತ್ತಿರುವ ಜಾಗಗಳಲ್ಲಿ ಪರಿಶೀಲಿಸಿ, ಸಮಸ್ಯೆಯನ್ನು ಬಗೆಹರಿಸುವಂತೆ ಸೂಚಿಸಿದರು ಹಾಗೂ ಶ್ರೀಮತಿ ಚಿಂತನ ರವರು ಮಾತನಾಡಿ ನೀರಿನ ಅಭಾವ ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೆಚ್ಚು ಸಮಯ ನೀರು ಪೂರೈಕೆ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

ಟಾಟಾನಗರದ ನಿವಾಸಿಗಳು ಮಾತನಾಡಿ ಸೋಮವಾರದಂದು ಸುರಿದ ಭಾರಿ ಮಳೆಗೆ ಮನೆಗಳಿಗೆ ಹಾಗೂ ರಸ್ತೆಗಳಲ್ಲಿ ನೀರು ನಿಲ್ಲುತ್ತಿರುವುದರಿಂದ ಬಡಾವಣೆಯಲ್ಲಿ ತುಂಬಾ ತೊಂದರೆ ಉಂಟಾಗಿರುವುದಾಗಿ ಸಭೆಗೆ ತಿಳಿಸಿದರು. ಬೃಹತ್ ನೀರುಗಾಲುವೆಗೆ ನೀರು ಸಮಪರ್ಕವಾಗಿ ಹೋಗುತ್ತಿಲ್ಲವೆಂದು ಹೇಳಿದರು.

ಶ್ರೀ. ಶ್ರೀನಿವಾಸ್, ಅಭಿಯಂತರರು (SWD) ಮಾತನಾಡಿ Storm Water Drain ನಿರ್ಮಾಣ ಮಾಡಲು ಅನುದಾನವು ಲಭ್ಯವಿಲ್ಲವೆಂದು ತಿಳಿಸಿದರು ಹಾಗೂ ಬೇರೆ ಕಡೆಗಳಿಂದ ಮುಖ್ಯ Storm Water Drain ಸಂಪರ್ಕ ಇರುವುದರಿಂದ ಸದರಿ ಬಡಾವಣೆಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಬಡಾವಣೆಯಲ್ಲಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದಾಗಿ ತಿಳಿಸಿದರು.

ಈ ಕುರಿತು ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು ಹಾಗೂ ನೋಡೆಲ್ ಅಧಿಕಾರಿಗಳು ಮಾತನಾಡಿ ಟಾಟಾನಗರ ಬಡಾವಣೆಯ ಸ್ಥಳೀಯರೊಂದಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿ ಈ ಕುರಿತು ತಾಂತ್ರಿಕವಾಗಿ ಸಮಸ್ಯೆಯನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪ್ರಸ್ತಾವನೆಯನ್ನು ಸಿದ್ದಪಡಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವಂತೆ SWD ಅಧಿಕಾರಿಗಳಿಗೆ ತಿಳಿಸಿದರು ಹಾಗೂ ಚರಂಡಿಗಳಲ್ಲಿ ತುಂಬಿರುವ ಮಣ್ಣನ್ನು ತೆರವುಗೊಳಿಸಲು ವಾರ್ಡ್ ಅಧಿಕಾರಿಗಳಿಗೆ ತಿಳಿಸಿದರು.

ಶ್ರೀ ಪ್ರವೀಣ್, ಕಿರಿಯ ಅಭಿಯಂತರರು ಮಾತನಾಡಿ ಸದರಿ ಸಿಲ್ಟ್ ಮಣ್ಣನ್ನು ತೆಗೆದು ಒಣಗಿದ ನಂತರ ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗುವುದು ಎಂದು ಸಭೆಗೆ ತಿಳಿಸಿದರು,

ಟಾಟಾನಗರ ನಿವಾಸಿಗಳು ಮಾತನಾಡಿ ಸದರಿ ಬಡಾವಣೆಯಲ್ಲಿ ಎಲ್‌ಇಡಿ ಬಲ್ಬ್‌ಗಳ ಸಮಸ್ಯೆ ಇದ್ದು, ಸಾರ್ವಜನಿಕರು ರಾತ್ರಿವೇಳೆ ಸಂಚಾರಿಸುವ ಸಂದರ್ಭದಲ್ಲಿ ತೊಂದರೆಯುಂಟಾಗಿರುವುದಾಗಿ ತಿಳಿಸಿದರು ಹಾಗೂ ಸದರಿ ಬಡಾವಣೆಯಲ್ಲಿ ಘನತ್ಯಾಜ್ಯದ ಸಮಸ್ಯೆ ಇರುತ್ತದೆ ನೀಡಿರುವ ಆಟೋ ಚಿಕ್ಕದಾಗಿದ್ದು, ಪರ್ಯಾಯ ವ್ಯವಸ್ಥೆ ಮಾಡುವಂತೆ ಸಭೆಗೆ ತಿಳಿಸಿದರು. ಬೃಹತ್ ನೀರುಗಾಲುವೆಗೆ ಸಮರ್ಪಕವಾಗಿ ಹೋಗುತ್ತಿಲ್ಲವೆಂದು ಹೇಳಿದರು. ಪೌರಕಾರ್ಮಿಕರು ರಜೆ ಇರುವ ಸಂದರ್ಭದಲ್ಲಿ ಬೇರೆ ಪೌರಕಾರ್ಮಿಕರನ್ನು ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು. ಟಾಟಾನಗರ ಆಧಾರ್ ಬೀಲ್ಡಿಂಗ್ ರಸ್ತೆಯಲ್ಲಿ ಸಂಜೆಯ ವೇಳೆಗೆ ರಸ್ತೆಯ ಎರಡು ಬದಿಗಳಲ್ಲಿ ಮೊಬೈಲ್ ಸೆಂಟರ್ ಆಟೋಗಳು ಹೆಚ್ಚಾಗುರುವುದರಿಂದ ಸಾರ್ವಜನಿಕ ದಟ್ಟಣೆ ಹೆಚ್ಚಾಗಿರುವುದಾಗಿ ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ. ಬಾಬುರೆಡ್ಡಿ, ಅಭಿಯಂತರರು, ವಿದ್ಯುತ್ ವಿಭಾಗ ರವರು ಎಲ್‌ಇಡಿ ಬಲ್ಬ್‌ಗಳ ಸಮಸ್ಯೆಯನ್ನು ಸ್ಥಳಪರಿಶೀಲಿಸಿ ಬಗೆಹರಿಸುವುದಾಗಿ ತಿಳಿಸಿದರು.

ಶ್ರೀಮತಿ. ಕವಿತ ಕಿ.ಆ.ನಿ ಕಸದ ಸಮಸ್ಯೆಯನ್ನು ಹಾಗೂ ಘನತ್ಯಾಜ್ಯ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು.

ಶ್ರೀಮತಿ ಶಾಂತಕುಮಾರಿ, ಬಾಲಾಜಿ ಬಡಾವಣೆ ನಿವಾಸಿ ಯುಜಿಡಿ ಬ್ಲಾಕ್ ಆದಾಗಿ ಒಂದು ವಾರವಾದರೂ ಸಮಸ್ಯೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಬಗೆಹರಿಸಿರುವುದಿಲ್ಲ ಎಂದು ಸಭೆಗೆ ಮನವಿ ಮಾಡಿದರು. ಬಾಲಾಜಿ ಬ್ಲಾಕ್ ಸ್ಪಾಟ್‌ನಲ್ಲಿ ಈಗಾಗಲೇ ಸ್ವಚ್ಛತೆ ಕಾಪಾಡಿದ್ದು, ಮುಂದೆ ಸದರಿ ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸಿ ಕಸವನ್ನು ಎಸೆಯುವವರ ವಿರುದ್ಧ ದಂಡವನ್ನು ವಿಧಿಸುವಂತೆ ತಿಳಿಸಿದರು.

ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (BWSSB) ಮಾತನಾಡಿ ಯುಜಿಡಿ ವಾಹನ ದುರಸ್ತಿ ಯಾಗಿರುವುದರಿಂದ ಈ ಸಮಸ್ಯೆ ಕಾಡುತ್ತಿದೆ ಹಾಗೂ ಯುಜಿಡಿ ವಾಹನ ಆದಷ್ಟು ಬೇಗ ಸರಿಪಡಿಸಿ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ತಿಳಿಸಿದರು. ನಂತರ ಶ್ರೀಮತಿ. ಕವಿತ ಕಿ.ಆ.ನಿ ಮಾತನಾಡಿ ಬಾಲಾಜಿ ನಗರದ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ವಾರಕ್ಕೊಮ್ಮೆ ರಸ್ತೆ ಬೀದಿಗಳನ್ನು ಪರಿಶೀಲಿಸಿ ವ್ಯಾಪಾರಿಗಳಿಗೆ ತಿಳುವಳಿಕೆ ನೀಡುವುದಾಗಿ ಸಭೆಗೆ ತಿಳಿಸಿದರು.

ಶ್ರೀ. ರಮೇಶ್ ಎಸ್, ಹೆಬ್ಬಾಳ ಟ್ರಾಫಿಕ್ ಪೊಲೀಸ್ ಇವರು ಮಾತನಾಡಿ ಕೊಡಿಗೇಹಳ್ಳಿ ಗ್ರಾಮದಲ್ಲಿರುವ ಹೈಮಾಸ್ ದೀಪವು ದುರಸ್ಥಿಯಲ್ಲಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಯುಂಟಾಗಿರುವುದಾಗಿ ತಿಳಿಸಿದಾಗಿ ಸಂಬಂಧಿಸಿದ ಎಲೆಕ್ಟ್ರಿಕಲ್ಸ್ ಅಧಿಕಾರಿರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು.

**ಕೋವಿಡ್ 19 ಸಾಂಕ್ರಾಮಿಕ ರೋಗದ ಬಗ್ಗೆ**

ನೋಡೆಲ್ ಅಧಿಕಾರಿಗಳು ಮಾತನಾಡಿ ಸಭೆಯಲ್ಲಿರುವ ಎಲ್ಲಾ ಆರ್‌ಡಬ್ಲ್ಯೂಎಸ್ ರವರ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಟೆಸ್ಟ್ ಸಮರ್ಪಕವಾಗಿ ಮಾಡುವುದರಿಂದ ಸಾಂಕ್ರಮಿಕ ರೋಗವನ್ನು ಪತ್ತೆ ಹಚ್ಚಲು ಸಹಾಯಕವಾಗುವುದು ಎಂದು ತಿಳಿಸಿದರು. ಆರೋಗ್ಯ ಇಲಾಖೆಯ ಡಾಕ್ಟರ್ ಪ್ರೇಮಾನಂದ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ವಸತಿ ಸಮುಚ್ಚಯರವರು ಇದುವರೆಗೂ ಕೋವಿಡ್ ಟೆಸ್ಟ್‌ಗೆ ಸಹಕಾರ ನೀಡುತ್ತಿಲ್ಲ ಎಂದು ತಿಳಿಸಿ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚು ಹೆಚ್ಚು ಟೆಸ್ಟ್ ಮಾಡುವುದರಿಂದ ಪ್ರಕರಣ ಪತ್ತೆ ಹಚ್ಚಿ ಸಮಸ್ಯೆ ಬಗೆಹರಿಸಲು ಸಹಕಾರವಾಗುತ್ತದೆ ಎಂದು ಸಭೆಗೆ ತಿಳಿಸಿದರು. ಕೊಡಿಗೇಹಳ್ಳಿ ವಾರ್ಡ್ ಸಂಖ್ಯೆ:08ರ ವ್ಯಾಪ್ತಿಯಲ್ಲಿ 5 ಟೀಮ್‌ಗಳಿದ್ದು, ಕೋವಿಡ್ ಟೆಸ್ಟ್ ಸಲುವಾಗಿ ಸಾರ್ವಜನಿಕರಲ್ಲಿ ಮನವಿ ಮಾಡುವಂತೆ ಆರ್‌ಡಬ್ಲ್ಯೂಎ ರವರುಗಳಲ್ಲಿ ಮನವಿ ಮಾಡಿದರು.

ಈ ಕುರಿತು ನೋಡೆಲ್ ಅಧಿಕಾರಿಗಳು ಮಾತನಾಡಿ ಕೋವಿಡ್-19 ಈ ರೋಗವನ್ನು ತಡೆಗಟ್ಟಲು ರೋಗ ಹರಡುವಿಕೆಯ ಸರಪಳಿಯನ್ನು ತಡೆಯಲು ಸೋಂಕಿತರನ್ನು ಅತೀ ಬೇಗನೆ ಪತ್ತೆ ಮಾಡಲು ಪರೀಕ್ಷೆಗಳನ್ನು ನಡೆಸುವುದು ಅತ್ಯವಶ್ಯಕವಾಗಿರುವುದರಿಂದ ವಾರ್ಡ್ ಸಂಖ್ಯೆ:08ರ ಎಲ್ಲಾ ಆರ್‌ಡಬ್ಲ್ಯೂಎ ರವರುಗಳು ಸ್ವಯಂ ಪ್ರೇರಿತರಾಗಿ ತಮ್ಮ ಅಪಾರ್ಟ್‌ಮೆಂಟ್, ವಾಸಿಸುವ ಸ್ಥಳಗಳಲ್ಲಿ ಬಡಾವಣೆಗಳಲ್ಲಿ ಸುತ್ತಮುತ್ತಲಿನ ಜನರನ್ನು ಪರೀಕ್ಷೆ ಒಳಪಡಲು ಸೂಕ್ತವಾದ ತಿಳುವಳಿಕೆಯನ್ನು ನೀಡಿ ಹೆಚ್ಚು ಪರೀಕ್ಷೆಗಳನ್ನು ನಡೆಸಲು ಸಹಕಾರವನ್ನು ನೀಡುವಂತೆ ಕೋರಿದರು.

ಟಾಟಾನಗರದ ನಿವಾಸಿಗಳು ಮಾತನಾಡಿ ಬಡಾವಣೆಯಲ್ಲಿರುವ ವಿದ್ಯುತ್ ತಂತಿಗಳಿಗೆ ಮರಗಳು ಹೊಂದಿ ಕೊಂಡಿರುವುದರಿಂದ ಸದರಿ ಮರ ಗಿಡಗಳನ್ನು ತೆರವುಗೊಳಿಸಿದ ನಂತರ ಬೆಸ್ಕಾಂ ಸಿಬ್ಬಂದಿಗಳು ಕಟಾವು ಮಾಡಿದ ಮರ ಗಿಡಗಳನ್ನು ಮೋರಿಗಳ ಹಾಗೂ ರಸ್ತೆಗಳ ಮೇಲೆ ಹಾಕಿರುವುದರಿಂದ ಮಳೆಗಾಲವಾಗಿರುವುದರಿಂದ ರಸ್ತೆ ಮತ್ತು ಮೋರಿಗಳಲ್ಲಿ ಕಸದ ರಾಶಿ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ಹಾಗೂ ನಿವೇಶನದ ಮಾಲೀಕರುಗಳಿಗೆ ತುಂಬಾ ತೊಂದರೆಯಾಗಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಕೋರಿದರು ಹಾಗೂ ನೋಡೆಲ್ ಅಧಿಕಾರಿರವರು ಮಾತನಾಡಿ ಬೆಸ್ಕಾಂ ಅಧಿಕಾರಿಗಳಿಗೆ ಈ ಕುರಿತು ಸೂಕ್ತಕ್ರಮ ವಹಿಸುವಂತೆ ಸೂಚಿಸಿದರು.

ಶ್ರೀ ಗುರು, ಕಾ.ಪಾ.ಅ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ

ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ಎ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

7/4/2020
(ಶ್ರೀ ಗುರು)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
9. ಕಛೇರಿ ಕಡತಕ್ಕೆ.